ಬ್ಯಾಂಕಿಂಗ್ ವೃತ್ತಿಯ ಜೊತೆಗೆ ಬರವಣಿಗೆಯನ್ನೂ ಹಚ್ಚಿಕೊಂಡಿರುವ **ಟಿ.ಆರ್. ಉಷಾರಾಣಿ** ಅವರು ಮೂಲತಃ ಮೈಸೂರಿನವರು. ಪ್ರಸ್ತುತ ಬೆಂಗಳೂರು ನಿವಾಸಿ. ವೃತ್ತಿಯ ದೆಸೆಯಿಂದಾಗಿ ಹಲವು ಊರುಗಳನ್ನು, ಅಲ್ಲಿನ ಆಗುಹೋಗುಗಳನ್ನು ತಿಳಿಯುವ ಅವಕಾಶ ಅವರಿಗೆ ದೊರೆತಿದೆ. 'ದೂರ ತೀರ ಯಾನ', 'ಮಂಜು ಮುಸುಕಿದ ಮನಸು' ಅವರ ಕಥಾಸಂಕಲನಗಳು.

ದೇಹ. ಬಹಳ ಕಷ್ಟಪಟ್ಟು ಆಕೆ ಸೂಪ್ ನುಂಗುತ್ತಿದ್ದರು. ಅವರಿಗೆ ಕುಡಿಸುತ್ತಿದ್ದಾಕೆಯೂ ಅತ್ಯಂತ ಪ್ರೀತಿಯಿಂದ 'ಈ ದಿನ ಶಾರದಮ್ಮನವರ ಸ್ಮರಣಾರ್ಥವಾಗಿ ಅವರ ಪತಿ ಮತ್ತು ಅವರ ಮಗಳು ಎಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದಾರೆ. ನೀವೀಗ ಜಾಣೆಯ ಹಾಗೆ ಸೂಪ್ ಕುಡಿದು ಶಾರದಮ್ಮನವರಿಗೆ 'ಓಂ ಶಾಂತಿ' ಮತ್ತು ಅವರ ಕುಟುಂಬದವರಿಗೆ ಒಳ್ಳೆಯದಾಗಲಿ ಎನ್ನಬೇಕು..'

ವೃದ್ಧೆ ಅದರುತ್ತಿದ್ದ ತನ್ನ ಕೈಗಳನ್ನು ಜೋಡಿಸಿ ಮನಸಾರೆ ಹರಸುತ್ತಿದ್ದಾರೆ. ಆ ಹುಡುಗಿ ಇವರ ಬೊಚ್ಚು ಬಾಯಿಂದ ಜಾರುತ್ತಿದ್ದ ಸೂಪನ್ನು ಒರೆಸುತ್ತಿದ್ದಳು. ಆ ಧ್ವನಿ ತನಗೆ ಬಹಳ ಪರಿಚಿತ ಎನಿಸಿತು ಸುಜಾತಾಗೆ. ಅಧ್ಯಕ್ಷೆ ಮುಂದುವರೆಸಿದರು. 'ಈಕೆ ದೇವರಂತಹ ಹುಡುಗಿ. ಎಲ್ಲರನ್ನೂ ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ.' ಇವರು ಬಾಗಿಲು ತೆರೆದು ಒಳಹೊಕ್ಕಿದಾಗ ಹುಡುಗಿ ಹಿಂದಿರುಗಿ ನೋಡಿದಳು. ಅವಳನ್ನು ನೋಡಿ ಸುಜಾತಳ ಕೈಯಲ್ಲಿದ್ದ ಶಾಲು ಕೆಳಗೆ ಬಿದ್ದು ಹೋಯಿತು. ಅವಳ ಬಾಯಿಂದ ಬಂದ ಹೆಸರು 'ಮೆಹರ್'. ಆ ಹುಡುಗಿ ಕೂಡ ಸ್ವಲ್ಪ ಗಲಿಬಿಲಿಗೊಂಡಳು. ನಡುಗುವ ಧ್ವನಿಯಲ್ಲಿ ಕೇಳಿದಳು:

'ಯಾರು ? ನೀವ್ಯಾರು? ಓಹೋ ಆ ದಿನ ನನ್ನನ್ನು ಬೇರೆ ಹೆಸರಿನಿಂದ ಗುರುತಿಸಿದವರು. ನನ್ನ ಹಿಂದೆ ಯಾಕೆ ಬಿದ್ದಿದ್ದೀರಿ? ನಾನು ನಿಮ್ಮ ಗೆಳತಿ ಅಲ್ಲ. ನಾನು ಆ ದಿನವೇ ನಿಮಗೆ ತಿಳಿಸಿದ್ದೆ. ದಯವಿಟ್ಟು ನನಗೆ ತೊಂದರೆ ಕೊಡಬೇಡಿ.' ಕಡ್ಡಿ ತುಂಡು ಮಾಡುವಂತಿದ್ದ ಅವಳ ಮಾತು ಸುಜಾತಳಿಗೆ ಪಿಚ್ಚೆನಿಸಿತು.

'ಈಕೆ ಮಾನಸ ಅಂತ. ನಮ್ಮಲ್ಲಿ ಎಂಟು ತಿಂಗಳಿನಿಂದ ಕೆಲಸ ಮಾಡುತ್ತಿದ್ದಾಳೆ. ಪಾಪ ಅನಾಥೆ. ಎಸ್‌ಎಸ್‌ಎಲ್ಸಿವರೆಗೂ ಓದಿದ್ದಾಳೆ. ಇಲ್ಲೇ ಇರುತ್ತಾಳೆ. ತುಂಬಾ ಒಳ್ಳೆಯ ಹುಡುಗಿ. ಈಗಲೇ ನೋಡಿದ್ದು ಅವಳು ಇಷ್ಟು ಜೋರಾಗಿ ಮಾತನಾಡಿದ್ದು. ಸಂಜೆ ಎಲ್ಲರಿಗೂ ಭಜನೆ ಹೇಳಿ ಕೊಡುತ್ತಾಳೆ. ರಾಮಾಯಣ - ಭಾರತ ಓದುತ್ತಾಳೆ'. ಅಧ್ಯಕ್ಷರು ಅವಳ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದ್ದರು. ಇದೆಲ್ಲ ಕೇಳಿ ಇವಳು ಮಾನಸಾ ಇರಬಹುದು. ಆದರೆ ಮೆಹರ್‌ಳನ್ನು ಎಷ್ಟು ಹೋಲುತ್ತಾಳೆ. ಮರೆಯಬೇಕೆಂದರೂ ಯಾಕೆ ನನ್ನನ್ನು ಕಾಡುತ್ತಿದ್ದಾಳೆ' ಮನಸ್ಸಿನಲ್ಲೇಳುತ್ತಿದ್ದ ಭಾವನೆಗಳಿಗೆ ಆಣೆಕಟ್ಟೇ ಇರಲಿಲ್ಲ ಸುಜಾತಳಿಗೆ.

'ಮೇಡಂ ಆ ಗಂಗಾಬಾಯಿ ಅಜ್ಜಿಗೂ ಸ್ವಲ್ಪ ಊಟ ಮಾಡಿಸಬೇಕು. ನಾನು...' ಎಂದು ಮೆಲ್ಲನೆ ಅಲ್ಲಿಂದ ಜಾರಿಕೊಂಡಳು ಮಾನಸ. ಅವಳು ತನ್ನಿಂದ ತಪ್ಪಿಸಿಕೊಳ್ಳಲು ಈ ನೆವ ಹೂಡುತ್ತಿದ್ದಳೆಂದು ತಿಳಿದು ಹೋಯಿತು ಸುಜಾತಳಿಗೆ.

ಇವಳು ನೂರಕ್ಕೆ ನೂರು ಮೆಹರುನ್ನೀಸ. ತನ್ನಿಂದ ತಪ್ಪಿಸಿಕೊಂಡು ಓಡಾಡುತ್ತಿದ್ದಾಳೆ. ಕೆಲಸಕ್ಕೆ ಸೇರಲು ಮಾನಸ ಆಗಿದ್ದಾಳೆ. ಅಧ್ಯಕ್ಷರನ್ನು ಏನಾದರೂ ಕೇಳಿದರೆ ಅವಳಿಗೆ ಕೆಲಸ ಹೋಗುವ ಸಾಧ್ಯತೆಯನ್ನು ಗ್ರಹಿಸಿ ಸುಜಾತ ಸುಮ್ಮನಾದಳು. ಆದರೆ ಇವಳ ಬಗ್ಗೆ ಕುತೂಹಲವಂತೂ ಇಮ್ಮಡಿಯಾಗಿತ್ತು. ಓದಿದ ಇವಳಿಗೆ ಇದೇನು ಗ್ರಹಚಾರ? ಅಜ್ಞಾತಳಾಗಿ ಬದುಕುವ ಅವಶ್ಯಕತೆ ಏನು? ಕುವೈಟ್‌ಗೆ ಹೋಗುವಳೆಂದು ಯಾರೋ ಹೇಳಿದ್ದರು. ಮನಸ್ಸಿನಲ್ಲೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರ ಯಾರು ಕೊಡುತ್ತಾರೆ? ತಾಯಿಯ ನೆನಪಿನಲ್ಲಿರಬೇಕಾದ ಅವಳ ಮನಸ್ಸನ್ನು ಮೆಹರುನ್ನೀಸ ಆವರಿಸಿಕೊಂಡುಬಿಟ್ಟಳು.

'ಈಕೆಯನ್ನು ಎಲ್ಲೋ ನೋಡಿದ್ದೆ ಎನಿಸುತ್ತಿದೆ.' ಅಧ್ಯಕ್ಷರ ಮಾತಿಗೆ ಏನಾದರೂ ಉತ್ತರ ಕೊಡಬೇಕಿತ್ತು ಅವಳಿಗೆ.

'ಇರಬಹುದೇನೋ, ನನ್ನ ಪರಿಚಯದವರೊಬ್ಬರು ಇವಳನ್ನು ನನಗೆ ಪರಿಚಯಿಸಿದರು. ಕಳೆದ ಎಂಟು ತಿಂಗಳಿನಿಂದಲೂ ನೋಡುತ್ತಿದ್ದೇನೆ. ಬಹಳ ಒಳ್ಳೆಯ